ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಕಂಪನಿ ಕಛೇರಿ,
ನವನಗರ, ಪಿ.ಬಿ.ರೋಡ, ಹುಬ್ಬಳ್ಳಿ – ೫೮೦ ೦೨೫.
Cell: +91 94483 70226

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Company Office,
Navanagar,P.B.Road,Hubballi-580025
E-mail ID: gmt.hescom@gmail.com
Corporate Identity Number (CIN): U31401KA2002SGC030437

ಸಂಖ್ಯೆ: HCO-50/ಬಿ-45/19-20 ದಿನಾಂಕ: 24 AUG 2020

ಲಗತ್ತು: 11 ಪುಟ

ಗೆ,

ಮುಖ್ಯ ಇಂಜಿನೀಯರರು(ವಿ),
ಕಾರ್ಯ ಮತ್ತು ಪಾಲನೆ ವಲಯ, ಹೆಸ್ಕಾಂ
ಬೆಳಗಾವಿ / ಹುಬ್ಬಳ್ಳಿ.

ಮಾನ್ಯರೇ,

**ವಿಷಯ:** PM-KUSUM, Component-B ಯೋಜನೆಯಡಿಯಲ್ಲಿ ರಾಜ್ಯದಾದ್ಯಂತ ಪ.ಜಾ/ಪ.ಪಂ ವರ್ಗದ ರೈತರ ಜಮೀನಿನ ಕೊಳವೆ/ತೆರೆದ ಬಾವಿಗಳಿಗೆ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಯೋಜನೆಯ ಅನುಷ್ಠಾನ ಕುರಿತು

**ಉಲ್ಲೇಖ:**
1. ಎಮ್ ಎನ್ ಆರ್ ಇ ರವರ PM-KUSUM, Component-B ಯೋಜನೆಯ ಅಧೀಕೃತ ಜ್ಞಾಪನಾ ಪತ್ರ ಸಂಖ್ಯೆ:32/645/2017-SPV Division ದಿ:22.07.2019
2. ಕೆ.ಆರ್.ಇ.ಡಿ.ಎಲ್ ಪತ್ರ ಸಂ: ಕೆ.ಆರ್.ಇ.ಡಿ.ಎಲ್/07/SOG-2/59/2020/3265-66 ದಿ:20.08.2020

FRDT-2

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖ-೧ ರನ್ವಯ, ಎಮ್ ಎನ್ ಆರ್ ಇ ರವರಿಂದ PM-KUSUM, Component-B ಯೋಜನೆಯ ಮಾರ್ಗಸೂಚಿಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ ಹಾಗೂ ಉಲ್ಲೇಖ-೨ರನ್ವಯ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್‌ರವರು PM-KUSUM, Component-B ಯೋಜನೆಯಡಿಯಲ್ಲಿ ರಾಜ್ಯದಾದ್ಯಂತ ಪ.ಜಾ/ಪ.ಪಂ ವರ್ಗದ ರೈತರ ಜಮೀನಿನ ಕೊಳವೆ / ತೆರೆದ ಬಾವಿಗಳಿಗೆ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಯೋಜನೆಯಡಿಯಲ್ಲಿ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿರುತ್ತಾರೆ.

ಮುಂದುವರೆದಂತೆ PM-KUSUM, Component-B ಯೋಜನೆಯನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸಬೇಕಾಗಿರುವುದರಿಂದ ಸದರಿ ಯೋಜನೆಯಡಿಯಲ್ಲಿ ನೋಂದಾಯಿತಗೊಳ್ಳುವ ಅರ್ಜಿಗಳ ಸ್ಥಳ ಪರಿಶೀಲನೆ ಹಾಗೂ ಮೂಲ ಡಿ.ಡಿಯನ್ನು ಕಾರ್ಯಸಾಧ್ಯತೆಯ ವರದಿಯೊಡನೆ ಸೂಕ್ತ ದಾಖಲೆಗಳನ್ನು ಉಪವಿಭಾಗ ಕಛೇರಿಗಳಿಂದ ನೇರವಾಗಿ ಕೆ.ಆರ್.ಡಿ.ಎಲ್. ಕಛೇರಿಗೆ ಕಳುಹಿಸಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್‌ರವರು ಕೋರಿರುತ್ತಾರೆ.

AEE/SDC 31/8
AE1-SDC 2/9
Received 31/8/20 12:40 pm /685

ಯೋಜನೆಯ ಮಾರ್ಗಸೂಚಿ - ಪೂರಕ ಮಾಹಿತಿ ಹಾಗೂ ವಿ.ಸ.ಕಂ ಗಳ ಕಾರ್ಯ ಮತ್ತು ಪಾಲನೆ ಉಪವಿಭಾಗದಿಂದ ಅನುಸರಿಸಬೇಕಾದ ಮತ್ತು ನಿರ್ವಹಿಸಬೇಕಾದ ಪಾತ್ರ ನಿರ್ವಹಣೆಯನ್ನು ಈ ಹಿಂದೆ ನೀಡಲಾದ ಸರ್ಕಾರಿ

IT-2

ಆದೇಶದಂತೆ ಕ್ರಮವಹಿಸಲು ಕೋರಿರುವ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು, ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೆ ಸದರಿ ಯೋಜನೆಯ ಅನುಷ್ಠಾನದ ಕುರಿತು ಸೂಕ್ತ ನಿರ್ದೇಶನ ನೀಡುವುದು ಹಾಗೂ ಈ ಕುರಿತು ತಾವು ಕೈಗೊಂಡ ಕ್ರಮದ ಬಗ್ಗೆ ಈ ಕಛೇರಿಗೆ ತಿಳಿಸುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ

ಪ್ರಧಾನ ವ್ಯವಸ್ಥಾಪಕರು (ತಾ)
ಹೆಸ್ಕಾಂ, ಹುಬ್ಬಳ್ಳಿ

ಪ್ರತಿ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ:

- ಅಧೀಕ್ಷಕ ಅಭಿಯಂತರರು(ವಿ), ಐಟಿ ಮತ್ತು ಎಮ್‌ಟಿ ಶಾಖೆ, ನಿಗಮ ಕಛೇರಿ, ಹುಬ್ಬಳ್ಳಿ ಸದರಿ ಮಾಹಿತಿಯನ್ನು ಹೆಸ್ಕಾಂ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಲಾಗಿದೆ.
- ಎಲ್ಲ ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ
- ಎಲ್ಲ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಹೆಸ್ಕಾಂ
- ಪ್ರ.ಕ / ಕ.ಪ್ರ

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
KARNATAKA RENEWABLE ENERGY DEVELOPMENT LIMITED
(A Government of Karnataka Undertaking)
K.R.E.D.L

ಕೆಆರ್‌ಇಡಿಎಲ್/07/SOG-2/59/2020/ 3265-66 ದಿನಾಂಕ: 20-8-2020

ಇವರಿಗೆ,

ವ್ಯವಸ್ಥಾಪಕ ನಿರ್ದೇಶಕರು,
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ,
ಕಾರ್ಪೋರೇಟ್ ಕಚೇರಿ ನವನಗರ,
ಪಿ.ಬಿ ರಸ್ತೆ, ಹುಬ್ಬಳ್ಳಿ-580025

ಮಾನ್ಯರೆ,

ವಿಷಯ: PM-KUSUM, Component-B ಯೋಜನೆಯಡಿಯಲ್ಲಿ ರಾಜ್ಯದ್ಯಂತ ಪ.ಜಾ/ಪ.ಪಂ ವರ್ಗದ ರೈತರ ಜಮೀನಿನ ಕೊಳವೆ/ತೆರೆದ ಬಾವಿಗಳಿಗೆ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಯೋಜನೆಯ ಅನುಷ್ಠಾನ ಕುರಿತು.

ಉಲ್ಲೇಖ:
1. ಎಂ.ಎನ್.ಆರ್.ಇ. ರವರ PM-KUSUM ಯೋಜನೆಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: 32/645/2017-SPV Division ದಿನಾಂಕ: 22.07.2019
2. ಸರ್ಕಾರದ ಪತ್ರ ಸಂಖ್ಯೆ:ಎನರ್ಜಿ 132 ಪಿಎಸ್‌ಆರ್ 2020 ದಿನಾಂಕ 16.06.2020
3. ಸಮಾಜ ಕಲ್ಯಾಣ ಇಲಾಖೆ ದಿನಾಂಕ 10.06.2020 ರ ಮೂಲಕ ದಿನಾಂಕ: 28.05.2020 ರಂದು ನಡೆದ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ರಾಜ್ಯ ಅಭಿವೃದ್ಧಿ ಪರಿಷತ್ತಿನ ನಡವಳಿಗಳು
4. ಎಂ.ಎನ್.ಆರ್.ಇ ರವರ ಪತ್ರ ಸಂಖ್ಯೆ:32/54/2018-/-SPV Division ದಿನಾಂಕ 02.12.2019.
5. ಸರ್ಕಾರದ ಆದೇಶ ಸಂಖ್ಯೆ ಇಎನ್ 63 ವಿಎಸ್‌ಸಿ 2018 ದಿನಾಂಕ 12.06.2018

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-1 ರನ್ವಯ ಎಂ.ಎನ್.ಆರ್.ಇ. ರವರಿಂದ PM-KUSUM (Pradhan Matri Kisan Urja Suraksha evam Uttan Mahaabhiyan) ಯೋಜನೆಯ ಮಾರ್ಗಸೂಚಿಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ.

#39, 'ಶಾಂತಿ ಗೃಹ', ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ,
ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕಛೇರಿ ಎದುರು,
ಅರಮನೆ ರಸ್ತೆ, ಬೆಂಗಳೂರು - 560 001.
Tel: 080-2220 8109, / 2220 7851, Fax: 080-2225 7399
# 39, "Shanthi Gruha",
Bharath Scouts & Guides Building,
Opp. the Chief Post Master General Office,
Palace Road, Bangalore - 560 001.
E-mail: kredlmd@gmail.com
GSTIN : 29AACCK3953F1ZG CIN : U75112KA1996PLC020020 website: http://www.kredlinfo.in

PM-KUSUM, Component-B ಯೋಜನೆಯಡಿಯಲ್ಲಿ ಸೌರ ಶಕ್ತಿ ಆಧಾರಿತ ಜಾಲ ಮುಕ್ತ ನೀರಾವರಿ ಪಂಪ್‌ಸೆಟ್‌ಗಳಿಗನ್ನು ಅನುಷ್ಠಾನಗೊಳಿಸುವುದಾಗಿರುತ್ತದೆ. ಸದರಿ ಯೋಜನೆಯಡಿ 7.5 ಹೆಚ್.ಪಿ ಸಾಮರ್ಥ್ಯದವರೆಗೆ ಸೌರ ಪಂಪ್‌ಸೆಟ್‌ಗಳಿಗೆ ಶೇ. 30 ರಷ್ಟು ಕೇಂದ್ರ ಸಹಾಯ ಧನವನ್ನು ಎಂ.ಎನ್.ಆರ್.ಇ ಯಿಂದ ಒದಗಿಸಲಾಗುತ್ತಿದೆ.

ರಾಜ್ಯ ಸರ್ಕಾರದಿಂದ ಉಲ್ಲೇಖ 2 ಮತ್ತು 3 ರಲ್ಲಿ ಅನುಮೋದಿಸಿದಂತೆ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದ ರೈತರ ಜಮೀನಿನ ತೆರೆದ/ಕೊಳವೆ ಬಾವಿಗಳಿಗೆ 7.5 ಹೆಚ್.ಪಿ ಸಾಮರ್ಥ್ಯದ ವರೆಗೆ ಸೌರ ಪಂಪ್‌ಸೆಟ್ ಗಳನ್ನು ಅಳವಡಿಸಲು ಶೇ. 50 ರಷ್ಟು ರಾಜ್ಯ ಸರ್ಕಾರದ ಅನುದಾನವನ್ನು ಒದಗಿಸಲಾಗುತ್ತಿದೆ ಹಾಗೂ ಉಳಿದ ಶೇ. 20 ರಷ್ಟನ್ನು ಮೊತ್ತವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ರೈತ ಫಲಾನುಭವಿಗಳಿಂದ ಭರಿಸಬೇಕಾಗಿರುತ್ತದೆ.

ಎಂ.ಎನ್.ಆರ್.ಇ ರವರ ಉಲ್ಲೇಖ-4ರ ಅನುಮೋದನೆಯಂತೆ ರಾಜ್ಯದಲ್ಲಿ 7.5 ಹೆಚ್.ಪಿ ಸಾಮರ್ಥ್ಯದವರೆಗೆ ಸೌರ ಪಂಪ್‌ಸೆಟ್ ಗಳನ್ನು ಅಳವಡಿಸುವ ಕಾರ್ಯಕ್ರಮವನ್ನು ಕೆ.ಆರ್.ಇ.ಡಿ.ಎಲ್ ವತಿಯಿಂದ ಕೈಗೆತ್ತುಕೊಳ್ಳಲಾಗಿದೆ. ಸೌರ ಪಂಪ್‌ಸೆಟ್‌ಗಳ ಅನುಷ್ಠಾನ ಕುರಿತು ರಾಜ್ಯ ಸರ್ಕಾರದಿಂದ ನೀಡಲಾಗಿರುವ ಆದೇಶದನ್ವಯ ಸೌರ ಪಂಪ್‌ಸೆಟ್‌ಗಳ ಅನುಷ್ಠಾನ ಕಾರ್ಯಕ್ರಮವನ್ನು PM-KUSUM, Component-B ಯೋಜನೆಯಡಿ ಮುಂದುವರೆಸಲಾಗುತ್ತಿದೆ.

ಪ್ರಸ್ತುತ, ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಅಡಿಯಲ್ಲಿ ಬಿಡುಗಡೆಯಾದ ಹಣದಿಂದ ಈ ಕೆಳಕಂಡಂತೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದ ರೈತರಿಂದ ಆನ್ ಮೂಲಕ PM-KUSUM, Component-B ಯೋಜನೆಯಡಿ ಸೌರ ಶಕ್ತಿ ಆಧಾರಿತ ಜಾಲ ಮುಕ್ತ ನೀರಾವರಿ ಪಂಪ್‌ಸೆಟ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ.

| ಸೌರ ಪಂಪ್ ಸೆಟ್ ಸಾಮರ್ಥ್ಯ | ಪ.ಜಾ/ಪ.ಪಂ ಅರ್ಜಿದಾರರು ಪಾವತಿಸಬೇಕಾಗಿರುವ ವಂತಿಗೆ ರೂ.ಗಳಲ್ಲಿ (ಪ್ರತಿ ಪಂಪ್‌ಸೆಟ್‌ಗೆ) | ಬಾವಿಯ ಮಾದರಿ | ಪರಿಶಿಷ್ಟ ಜಾತಿ ವರ್ಗದ ಅರ್ಜಿಗಳ ಸಂಖ್ಯೆ | ಪರಿಶಿಷ್ಟ ಪಂಗಡ ವರ್ಗದ ಅರ್ಜಿಗಳ ಸಂಖ್ಯೆ |
|---|---|---|---|---|
| 3 ಹೆಚ್.ಪಿ | 32,300 | ತೆರೆದ ಬಾವಿ | 18 | 7 |
| 7.5 ಹೆಚ್.ಪಿ | 63,380 | ಕೊಳವೆ ಬಾವಿ | 228 | 93 |
| ಒಟ್ಟು ಅರ್ಜಿಗಳು | | | 246 | 100 |

ನಿಗಧಿತ ಸಮಯದೊಳಗೆ ಎಮ್.ಎನ್.ಆರ್.ಇ ಮತ್ತು ರಾಜ್ಯ ಸರ್ಕಾರದ ಅನುದಾನವನ್ನು ಪೂರ್ಣಮಟ್ಟದಲ್ಲಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಹಾಗೂ ರೈತರಿಗೆ PM-KUSUM, Component-B ಯೋಜನೆಯಡಿಯ ಸೌರ ಶಕ್ತಿ ಆಧಾರಿತ ಜಾಲ ಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸಲು ವಿದ್ಯುತ್ ಸರಬರಾಜು ಕಂಪನಿಗಳ ಸಹಕಾರ ಅತ್ಯವಶ್ಯಕವಾಗಿರುತ್ತದೆ. ಸದರಿ ಯೋಜನೆಯಡಿ ಆಹ್ವಾನಿಸಲಾಗುತ್ತಿರುವ ಅರ್ಜಿಗಳ ಕುರಿತು ಗ್ರಾಹಕರಲ್ಲಿ ನೀಡಲಾಗುತ್ತಿರುವ ಯೋಜನೆಯ ಮಾರ್ಗಸೂಚಿಗಳು ಹಾಗೂ ಪೂರಕ ಮಾಹಿತಿಯನ್ನು ಈ ಪತ್ರದೊಂದಿಗೆ ಮಾಹಿತಿಗಾಗಿ ಲಗತ್ತಿಸಲಾಗಿದೆ. ಆನ್‌ಲೈನ್ ನೋಂದಾವಣಿ ಪ್ರಕ್ರಿಯೆಯ ಮೂಲಕ ನೊಂದಾಯಿಸಿಕೊಂಡ ಅರ್ಜಿದಾರರ ದಾಖಲೆಗಳ ಪರಿಶೀಲನಾ ಕಾರ್ಯವನ್ನು ವಿ.ಸ.ಕಂ ಗಳ ಕಾರ್ಯ ಮತ್ತು ಪಾಲನೆ ಉಪವಿಭಾಗದ ಅಧಿಕಾರಿಗಳಿಂದ ಕ್ರಮವಹಿಸಬೇಕಾಗಿರುತ್ತದೆ. ಆದುದರಿಂದ ವಿ.ಸ.ಕಂ ಗಳ ಕಾರ್ಯ ಮತ್ತು ಪಾಲನೆ ಉಪ-ವಿಭಾಗದಿಂದ ಅನುಸರಿಸಬೇಕಾದ ಮತ್ತು ನಿರ್ವಹಿಸಬೇಕಾದ ಈ ಕೆಳಕಂಡ ಪಾತ್ರ ನಿರ್ವಹಣೆಯಯನ್ನು ಈ ಹಿಂದೆ ನೀಡಲಾದ ಸರ್ಕಾರಿ ಆದೇಶದಂತೆ, ಕ್ರಮವಹಿಸಲು ಕೋರಲಾಗಿದೆ.

- ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ನೇರವಾಗಿ ಅರ್ಜಿದಾರರೇ ನೋಂದಾಯಿಸುವರು. ಆನ್‌ಲೈನ್‌ನಲ್ಲಿ ನೋಂದಾವಣೆಯಾದ ಐದು ದಿನಗಳೊಳಗಾಗಿ ಅರ್ಜಿದಾರರಿಂದ ಸಂಬಂಧಿಸಿದ ಸ್ವೀಕೃತಿ ಅರ್ಜಿ (acknowledge copy), ಸ್ವಯಂ ದೃಢೀಕರಿಸಿದ ದಾಖಲೆಗಳ (ಎರಡು ಸೆಟ್) ಪ್ರತಿಗಳಾದ ಆಧಾರ್ ಕಾರ್ಡ ಪ್ರತಿ, RTC, ಜಲ ಇಳುವರಿ ಪತ್ರ, ರೇಷನ್ ಕಾರ್ಡ್, ಜಾತಿ ಪ್ರಮಾಣ ಪತ್ರ (ಆರ್.ಡಿ. ನಂಬರ್ ಒಳಗೊಂಡಂತೆ), ಇತ್ತೀಚಿನ ಒಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಮತ್ತು ಫಲಾನುಭವಿಯ ವಂತಿಗೆ 3 ಹೆಚ್.ಪಿ ಗೆ ರೂ 32,300/-, 7.5 ಹೆಚ್.ಪಿ ಗೆ ರೂ 63,380/- ಗಳ ಮೂಲ ಡಿ.ಡಿಯನ್ನು ಸಂಬಂಧಿಸಿದ ವಿ.ಸ.ಕಂ ಉಪ-ವಿಭಾಗೀಯ ಕಛೇರಿಗಳಲ್ಲಿ ಸಂಗ್ರಹಿಸುವುದು.
- ಅರ್ಜಿದಾರರು ಸಲ್ಲಿಸಲಾದ ಮಾಹಿತಿಯನ್ನಾಧರಿಸಿ, ಸ್ಥಳ ಪರಿಶೀಲಿಸಿದ ನಂತರ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಿ, ನೋಂದಾವಣಿಯಾದ 10 ದಿನಗಳೊಳಗಾಗಿ ಮೂಲ ಡಿಡಿ ಹಾಗೂ ಫಲಾನುಭವಿಗಳ ವಿವರಗಳನ್ನು, ಆರ್.ಟಿ.ಸಿ., ಆಧಾರ್ ಕಾರ್ಡ, ರೇಷನ್ ಕಾರ್ಡ ಪ್ರತಿಯ ಒಂದು ಸೆಟ್ ದಾಖಲೆಗಳನ್ನು ಉಪವಿಭಾಗೀಯ ಕಛೇರಿಗಳಿಂದ ನೇರವಾಗಿ ಕೆ.ಆರ್.ಇ.ಡಿ.ಎಲ್ ಕಛೇರಿಗೆ ರವಾನಿಸುವುದು.
- ಆನ್‌ಲೈನ್‌ನಲ್ಲಿ ನೋಂದಾವಣೆಗೊಂಡ ಅರ್ಜಿದಾರರು 5 ದಿನಗಳೊಳಗಾಗಿ ಯಾವುದೇ ಮಾಹಿತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ, ಕಛೇರಿಯ ಅಧಿಕಾರಿಗಳು ಲಭ್ಯವಿರುವ ಮಾಹಿತಿಯನ್ನಾಧರಿಸಿ ದಾಖಲೆಗಳನ್ನು ಪಡೆಯುವಲ್ಲಿ ಆಸಕ್ತಿ ತೋರುವುದು. ಇಲ್ಲದಿದ್ದಲ್ಲಿ,

ಅರ್ಜಿಯನ್ನು ತಿರಸ್ಕೃತಗೊಳಿಸಿ, ತಿರಸ್ಕೃತಗೊಂಡ ಅರ್ಜಿ ವಿವರಗಳನ್ನು ಕೆ.ಆರ್.ಇ.ಡಿ.ಎಲ್ ಕಛೇರಿ/ಸಂಬಂಧಿಸಿದ ವಿ.ಸ.ಕಂ ಕಾರ್ಪೋರೇಟ್ ಕಛೇರಿಗಳಿಗೆ ಇ-ಮೇಲ್ ಮುಖಾಂತರ ಕೂಡಲೇ ಸಲ್ಲಿಸುವುದು. (ಆನ್‌ಲೈನ್ ನಲ್ಲಿ ನೋಂದಾಯಿಸಿಕೊಳ್ಳುವ ಅರ್ಜಿದಾರರ ವಿವರಗಳನ್ನು ಕೆ.ಆರ್ .ಇ.ಡಿ.ಎಲ್ ಕಛೇರಿಯಿಂದ ಇ-ಮೇಲ್ ಮುಖಾಂತರ ವಿ.ಸ.ಕಂ ಕಾರ್ಪೋರೇಟ್ ಕಛೇರಿಗಳಿಗೆ/ಸಂಬಂಧಿಸಿದ ಉಪ-ವಿಭಾಗಗಳಿಗೆ ಕಳುಹಿಸಲಾಗುವುದು.)

- ಕೊಳವೆ ಬಾವಿಯ ನೀರಿನ ಆಳದ ಬಗ್ಗೆ ಕಾರ್ಯಕ್ಷಮತೆಯನ್ನು ಸಂಬಂಧಿಸಿದ ಅನುಷ್ಠಾನಗೊಳಿಸುವ ಏಜನ್ಸಿಯು ಜವಾಬ್ದಾರಿಯಾಗಿರುತ್ತದೆ. ಆದುದರಿಂದ ವಿ.ಸ.ಕಂ ಉಪ-ವಿಭಾಗ ದಿಂದ ನೀಡಲಾಗುವ ಕಾರ್ಯಸಾಧ್ಯತೆ ವರದಿಯಲ್ಲಿ ಕೊಳವೆ/ತೆರದ ಬಾವಿ ಅರ್ಜಿದಾರರ ಜಮೀನಿನಲ್ಲಿ ಲಭ್ಯವಿರುವ ಬಗ್ಗೆ ಮಾಹಿತಿ ಒದಗಿಸುವುದು. ಕೊಳವೆ/ತೆರದ ಬಾವಿಗೆ ಪಂಪ್‌ಸೆಟ್ ಈಗಾಗಲೇ ಅಳವಡಿಸಿ ವಿದ್ಯುತ್ ಗ್ರಿಡ್ ಸಂಪರ್ಕ ಇದ್ದಲ್ಲಿ ಆರ್.ಆರ್. ನಂಬರ್ ನಮೂದಿಸುವುದು ಹಾಗೂ ಸದರಿ ಅರ್ಜಿದಾರರಿಂದ ಶಾಶ್ವತ ವಿದ್ಯುತ್ ನಿಲುಗಡೆಗೆ ಅರ್ಜಿ ಪಡೆದು, ಸೌರ ಪಂಪ್‌ಸೆಟ್ ಚಾಲನೆಗೊಳಿಸುವ ಮುನ್ನ ಹಾಲಿ ವಿದ್ಯುತ್ ಸಂಪರ್ಕವನ್ನು ಶಾಶ್ವತ ನಿಲುಗಡೆಗೊಳಿಸಲು ಕ್ರಮವಹಿಸುವುದು.
- ಈಗಾಗಲೇ ಗಂಗಾಕಲ್ಯಾಣ ಯೋಜನೆಯಡಿ ಲಾಭವನ್ನು ಪಡೆದಿರುವ ಹಾಗೂ ಪಡೆಯುವ ಪ್ರಕ್ರಿಯೆಯಲ್ಲಿರವ ಫಲಾನುಭವಿಗಳು ಸದರಿ ಯೋಜನೆಯ ಲಾಭವನ್ನು ಪಡೆಯಲು ಅರ್ಹರಿರುವುದಿಲ್ಲ. ಇದನ್ನು ಪರಿಶೀಲಿಸಿ ಇಂತಹ ಅರ್ಜಿಗಳು ನೊಂದಾವಣೆಗೊಂಡಲ್ಲಿ ಅರ್ಜಿಯನ್ನು ತಿರಸ್ಕರಿಸಿ ವರದಿಯನ್ನು ಸಲ್ಲಿಸುವುದು.
- ಕಪ್ಪು ವಲಯ (Dark Zone) ದಂತಹ ಪ್ರದೇಶಗಳಲ್ಲಿ ನೀರಿನ ಮಟ್ಟವು ಬಹಳ ಕಡಿಮೆ ಇರುವುದರಿಂದ ಸದರಿ ವಲಯಗಳಿಂದ ಬಂದಂತಹ ಅರ್ಜಿಗಳನ್ನು ತಿರಸ್ಕರಿಸಿ ವರದಿಯನ್ನು ನೀಡುವುದು.
- ಸಂಬಂಧಿಸಿದ ಧೃಡೀಕರಣ ಮತ್ತು ಇತರೆ ದಾಖಲೆಗಳನ್ನು ಉಪ-ವಿಭಾಗೀಯ ಕಛೇರಿಗಳಿಂದಲೇ ಕೆ.ಆರ್.ಇ.ಡಿ.ಎಲ್ ಸಂಸ್ಥೆಗೆ ನೇರವಾಗಿ ಸಲ್ಲಿಸಲು ಕೋರಲಾಗಿದೆ.

ಯೋಜನೆಯನ್ನು ನಿಗಧಿತ ಸಮಯದೊಳಗೆ ಪೂರ್ಣಗೊಳಿಸಬೇಕಾಗಿರುವುದರಿಂದ, ಆಧ್ಯತೆಯ ಮೇರೆಗೆ ಕಾ ಮತ್ತು ಪಾ ಉಪವಿಭಾಗಾಧಿಕಾರಿಗಳು ಕಾರ್ಯನಿರ್ವಹಿಸಬೇಕಾಗಿರುತ್ತದೆ. ಸ್ಥಳ ಪರಿಶೀಲನೆ ಹಾಗೂ ಮೂಲ ಡಿ.ಡಿ.ಯನ್ನು ಕಾರ್ಯಸಾಧ್ಯತೆಯ ವರದಿಯೊಡನೆ ಸೂಕ್ತ ದಾಖಲೆಗಳನ್ನು ಉಪವಿಭಾಗ ಕಛೇರಿಗಳಿಂದ ಕೆ.ಆರ್.ಇ.ಡಿ.ಎಲ್ ಕಛೇರಿಗೆ ನೇರವಾಗಿ ಕಳಿಸಲು ಕಾ ಮತ್ತು ಪಾ ಉಪವಿಭಾಗಾಧಿಕಾರಿಗಳು

ಆಧ್ಯತೆ ಮೇಲೆ ಕಾರ್ಯನಿರ್ವಹಿಸಲು, ತಮ್ಮ ಅಧೀನ ಅಧಿಕಾರಿಗಳಿಗೆ (ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರವರೆಗೆ) ಸೂಕ್ತ ಆದೇಶವನ್ನು ನೀಡಲು ಈ ಮೂಲಕ ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

20/8/2020

(ಡಾ॥ ಹೆಚ್.ಬಿ ಬೂದೆಪ್ಪ)

ವ್ಯವಸ್ಥಾಪಕ ನಿರ್ದೇಶಕರು

ಪ್ರತಿ:

ಅಪರ ಮುಖ್ಯಕಾರ್ಯದರ್ಶಿಗಳು, ಇಂಧನ ಇಲಾಖೆ, ಕರ್ನಾಟಕ ಸರ್ಕಾರ, 2ನೇ ಮಹಡಿ, ವಿಕಾಸಸೌಧ, ಬೆಂಗಳೂರು –560001.

**PM-KUSUM (Pradhan Mantri Kisan Urja Suraksha evam Uttan Mahaabhiyan), Component-B ಅಡಿಯಲ್ಲಿ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಯೋಜನೆ**

## ಮಾರ್ಗಸೂಚಿಗಳು ಹಾಗೂ ಪೂರಕ ಮಾಹಿತಿ

ಕೇಂದ್ರ ಸರ್ಕಾರದ PM-KUSUM (Pradhan Mantri Kisan Urja Suraksha evam Uttan Mahaabhiyan), Component-B ಯೋಜನೆಯಡಿಯಲ್ಲಿ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಯೋಜನೆಯನ್ನು ಕ್ರೆಡಲ್ ಮೂಲಕ ರಾಜ್ಯ ವ್ಯಾಪ್ತಿಯಲ್ಲಿ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಸಹಯೋಗದೊಂದಿಗೆ ಕೈಗೊಳ್ಳಲಾಗುತ್ತಿದೆ. PM-KUSUM, Component-B ಯೋಜನೆಯಡಿಯಲ್ಲಿ ಗರಿಷ್ಟ 7.5 ಹೆಚ್.ಪಿ ಸಾಮರ್ಥ್ಯದವರೆಗೆ ಪ್ರತಿ ಸೌರ ಪಂಪ್‌ಸೆಟ್‌ಗೆ ಶೇ. 30 ರಷ್ಟು ಕೇಂದ್ರ ಸಹಾಯ ಧನ ಒದಗಿಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ರೈತ ಫಲಾನುಭವಿಗಳ ಕೊಳವೆ/ತೆರೆದ ಬಾವಿಗಳಿಗೆ ಸೌರ ಪಂಪ್‌ಸೆಟ್ ಒದಗಿಸಲು ಶೇ. 50 ರಷ್ಟು ಸಹಾಯಧನ ಒದಗಿಸಲಾಗುತ್ತಿದೆ. ಉಳಿದ ಶೇ. 20 ರಷ್ಟು ಹಣವನ್ನು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ರೈತ ಫಲಾನುಭವಿಗಳಿಂದ ವಂತಿಗೆಯಾಗಿ ಪಾವತಿಸಬೇಕಾಗಿರುತ್ತದೆ. ಸದರಿ ಯೋಜನೆಯ ಲಾಭವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ರೈತರು ಪಡೆಯಬಹುದಾಗಿರುತ್ತದೆ. ಪ್ರಸ್ತುತ ಹಂತದಲ್ಲಿ ಸಾಮಾನ್ಯ ವರ್ಗದ ರೈತರು ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ. ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ರೈತರು ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.

1) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಈ ಕೆಳಕಂಡ ಸಾಮರ್ಥ್ಯಗಳಲ್ಲಿ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್ ಸೆಟ್ ಘಟಕಗಳನ್ನು ಒದಗಿಸಲಾಗುತ್ತಿದೆ:

   ತೆರೆದ ಬಾವಿಗಳಿಗೆ : 3 ಹೆಚ್.ಪಿ ಸಾಮರ್ಥ್ಯದ (surface pumps)

   ಕೊಳವೆ ಬಾವಿಗಳಿಗೆ :7.5 ಹೆಚ್.ಪಿ ಸಾಮರ್ಥ್ಯದ (submersible pumps)

2) ನೀರೆತ್ತುವ ಒಟ್ಟಾರೆ ಆಳವು ಈ ಕೆಳಗಿನಂತೆ ಸೀಮಿತಗೊಳಿಸಲಾಗಿದೆ:

   ಅ) 3 ಹೆಚ್.ಪಿ. ಸಾಮರ್ಥ್ಯಕ್ಕೆ : 65ಅಡಿ ಯಿಂದ 80 ಅಡಿವರೆಗೆ

   ಆ) 7.5 ಹೆಚ್.ಪಿ. ಸಾಮರ್ಥ್ಯಕ್ಕೆ : 328 ಅಡಿ ಯಿಂದ 490 ಅಡಿವರೆಗೆ

2) ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯುವ ಮತ್ತು ಈಗಾಗಲೇ ವಿದ್ಯುತ್ ಸಂಪರ್ಕದಲ್ಲಿರುವ ರೈತರ ಕೃಷಿ ಪಂಪ್‌ಸೆಟ್‌ಗಳಿಗೂ ಸಹ ಈ ಯೋಜನೆಯು ಅನ್ವಯಿಸುತ್ತದೆ (ಹಾಲಿ ವಿದ್ಯುತ್ ಸಂಪರ್ಕವನ್ನು ಶಾಶ್ವತ ನಿಲುಗಡೆಗೊಳಿಸಿದ ಬಳಿಕ).

3) ಈಗಾಗಲೇ ಗಂಗಾಕಲ್ಯಾಣ ಯೋಜನೆಯಡಿ ಲಾಭವನ್ನು ಪಡೆದಿರುವ ಹಾಗೂ ಪಡೆಯುವ ಪ್ರಕ್ರಿಯೆಯಲ್ಲಿರವ ಫಲಾನುಭವಿಗಳು ಸದರಿ ಯೋಜನೆಯ ಲಾಭವನ್ನು ಪಡೆಯಲು ಅರ್ಹರಿರುವುದಿಲ್ಲ.

4) PM-KUSUM, Component-B ಮಾರ್ಗಸೂಚಿಗಳನ್ವಯ Dark Zone ಎಂದು ಘೋಷಿಸಿರುವ ಪ್ರದೇಶಗಳಲ್ಲಿ ಸದರಿ ಯೋಜನೆಯ ಲಾಭವನ್ನು ಪಡೆಯಲು ಅರ್ಜಿದಾರರು ಅರ್ಹರಿರುವುದಿಲ್ಲ.

5) ಪ್ರತಿ ಸೌರ ಪಂಪ್‌ಸೆಟ್‌ನ ಟೆಂಡರ್ ದರ ಹಾಗೂ ಇದರಲ್ಲಿ ಕೇಂದ್ರ ಸರ್ಕಾರದಿಂದ, ರಾಜ್ಯ ಸರ್ಕಾರದಿಂದ ಒದಗಿಸಲಾಗುತ್ತಿರುವ ಸಹಾಯಧನದ ವಿವರಗಳು ಮತ್ತು ಪ.ಜಾ/ಪ.ಪಂ ಅರ್ಜಿ ದಾರರು ಪಾವತಿಸಬೇಕಾಗಿರುವ ವಂತಿಗೆ ವಿವರಗಳು :

| ಸೌರ ಪಂಪ್ ಸೆಟ್ ಸಾಮರ್ಥ್ಯ | ಬಾವಿಯ ಮಾದರಿ | ಟೆಂಡರ್ ದರ ಪ್ರತಿ ಸೌರ ಪಂಪ್‌ಸೆಟ್‌ಗೆ ರೂ. ಗಳಲ್ಲಿ | ಒದಗಿಸಲಾಗುತ್ತಿರವ ಕೇಂದ್ರ ಸರ್ಕಾರದ ಸಹಾಯಧನ (ಶೇ.30) ರೂ. ಗಳಲ್ಲಿ | ಒದಗಿಸಲಾಗುತ್ತಿರವ ರಾಜ್ಯ ಸರ್ಕಾರದ ಸಹಾಯಧನ (ಶೇ.50) ರೂ. ಗಳಲ್ಲಿ | ಪ.ಜಾ/ಪ.ಪಂ ಅರ್ಜಿ ದಾರರು ಪಾವತಿಸಬೇಕಾಗಿರುವ ವಂತಿಗೆ (ಶೇ.20) ರೂ.ಗಳಲ್ಲಿ |
|---|---|---|---|---|---|
| 3 ಹೆಚ್.ಪಿ | ತೆರೆದ ಬಾವಿ | 1,61,496 | 48,448 | 80,748 | 32,300 |
| 7.5 ಹೆಚ್.ಪಿ | ಕೊಳವೆ ಬಾವಿ | 3,16,899 | 95,069 | 1,58,450 | 63,380 |

6) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದ ಅರ್ಜಿದಾರರು ಪ್ರತಿ ಸೌರ ಪಂಪ್‌ಸೆಟ್‌ಗೆ ಡಿ.ಡಿ ಮುಖಾಂತವೇ ಪಾವತಿಸಬೇಕಾಗಿರುವ ವಂತಿಗೆ ವಿವರಗಳು ಕೆಳಕಂಡಂತಿವೆ:

3 ಹೆಚ್.ಪಿ ಸಾಮರ್ಥ್ಯದ ಸೌರ ಪಂಪ್‌ಸೆಟ್ ಘಟಕಕ್ಕೆ : ರೂ.32,300/-

7.5 ಹೆಚ್.ಪಿ ಸಾಮರ್ಥ್ಯದ ಸೌರ ಪಂಪ್‌ಸೆಟ್ ಘಟಕಕ್ಕೆ : ರೂ. 63,380/-.

7) "ಮೊದಲು ಬಂದವರಿಗೆ ಮೊದಲ ಆದ್ಯತೆಯ" ಮೇರೆಗೆ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸಲಾಗುವುದು.

8) ಸ್ವೀಕರಿಸಲಾಗುವ ಅರ್ಹ ಗರಿಷ್ಟ ಅರ್ಜಿಗಳ ವಿವರಗಳು ಈ ಕೆಳಗಿನಂತಿವೆ:

| ಸೌರ ಪಂಪ್‌ಸೆಟ್ ಸಾಮರ್ಥ್ಯ | ಬಾವಿಯ ಮಾದರಿ | ಪರಿಶಿಷ್ಟ ಜಾತಿ ವರ್ಗದ ಅರ್ಜಿಗಳು | ಪರಿಶಿಷ್ಟ ಪಂಗಡ ವರ್ಗದ ಅರ್ಜಿಗಳು | ಒಟ್ಟು |
|---|---|---|---|---|
| 3 ಹೆಚ್.ಪಿ | ತೆರೆದ ಬಾವಿ | 18 | 7 | 25 |
| 7.5 ಹೆಚ್.ಪಿ | ಕೊಳವೆ ಬಾವಿ | 228 | 93 | 321 |
| ಒಟ್ಟು ಅರ್ಜಿಗಳು | | 246 | 100 | 346 |

9) ದೊಷಪೂರಿತ, ತಪ್ಪು ಮಾಹಿತಿ, ಇದರಿಂದ ತಿರಸ್ಕೃತಗೊಳ್ಳುವ ಅರ್ಜಿಗಳನ್ನು ಗಮನದಲ್ಲಿರಿಸಿ, ಶೇ. 10 ರಷ್ಟು ಹೆಚ್ಚುವರಿ ಅರ್ಜಿಗಳನ್ನು ಸ್ವೀಕರಿಸಲಾಗುವುದು.

10) ವರ್ಗವಾರು ನೀಡಲಾಗಿರುವ ಉದ್ದೇಶಿತ ಗರಿಷ್ಠ ಅರ್ಜಿಗಳ ಸಂಖ್ಯೆ ತಲುಪಿದ ನಂತರ ಅರ್ಜಿನೊಂದಾವಣಿ ಪ್ರಕ್ರಿಯೆಯು ಮುಕ್ತಾಯಗೊಳ್ಳುವುದು.

ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಲು ಒದಗಿಸಬೇಕಾದ ಅಗತ್ಯ ಮಾಹಿತಗಳು:

ಅ) ಭೂ ಮಾಲಿಕತ್ವವುಳ್ಳ ಅರ್ಜಿದಾರರ ಹೆಸರು ಆ) ವಾಸಸ್ಥಳ ಮತ್ತು ವಿಳಾಸ: ಗ್ರಾಮ, ತಾಲ್ಲೂಕು, ಜಿಲ್ಲೆ ಇ)ಆಧಾರ್ ಸಂಖ್ಯೆ ಈ) ದೂರವಾಣಿ ಸಂಖ್ಯೆ ಉ) ಭೂ ದಾಖಲೆಗಳ ವಿವರಗಳು: ಆರ್.ಟಿ.ಸಿ, ಸರ್ವೆ ನಂ., ಗ್ರಾಮ, ತಾಲ್ಲೂಕು, ಹೊಬಳಿ, ಗ್ರಾಮಪಂಚಾಯತಿ, ಜಿಲ್ಲೆ ಊ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ಅರ್ಜಿದಾರರ ವಂತಿಗೆ ವಿವರ: ಡಿ.ಡಿ. ಸಂಖ್ಯೆ ಹಾಗೂ ದಿನಾಂಕ (ಡಿ.ಡಿ ಯನ್ನು **MD KREDL** ರವರ ಹೆಸರಿಗೆ **payable at Bengaluru** ಪಡೆಯುವುದು, 3 ಹೆಚ್.ಪಿ ಸಾಮರ್ಥ್ಯದ ಸೌರ ಪಂಪ್‌ಸೆಟ್ ಘಟಕಕ್ಕೆ : ರೂ.32,300/-, 7.5 ಹೆಚ್.ಪಿ ಸಾಮರ್ಥ್ಯದ ಸೌರ ಪಂಪ್‌ಸೆಟ್ ಘಟಕಕ್ಕೆ : ರೂ. 63,380/-) ಎ) ಅರ್ಜಿದಾರರ ಬ್ಯಾಂಕ ಖಾತೆ ವಿವರ: ಅರ್ಜಿದಾರರ ಹೆಸರು, ಬ್ಯಾಂಕ ಹೆಸರು, ಬ್ಯಾಂಕ ಶಾಖೆ ಹೆಸರು, ಖಾತೆಯ ಸಂಖ್ಯೆ, ಐ.ಎಫ್.ಎಸ್.ಸಿ ಕೋಡ್ ಏ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ಜಾತಿ ಪ್ರಮಾಣ ಪತ್ರದ ವಿವರಗಳು: ಆರ್.ಡಿ. ಸಂಖ್ಯೆ ಐ) ರೇಷನ್ ಕಾರ್ಡ ವಿವರಗಳು: ಕಾರ್ಡ ಸಂಖ್ಯೆ, ಎ.ಪಿ.ಎಲ್/ಬಿ.ಪಿ.ಎಲ್ ಒ) ಈಗಾಗಲೇ ವಿದ್ಯುತ್ ಸಂಪರ್ಕದಲ್ಲಿ ಕೃಷಿ ಪಂಪ್‌ಸೆಟ್ ಇದ್ದಲ್ಲಿ ಆರ್.ಆರ್. ಸಂಖ್ಯೆ ಒದಗಿಸುವುದು.

## <u>ಆನ್ ಲೈನ್ ಅರ್ಜಿಗಳನ್ನು ಸಲ್ಲಿಸಲು ಪೂರಕ ಮಾಹಿತಿ</u>

ಅರ್ಜಿದಾರರ ಆನ್‌ಲೈನ್ ನೋಂದಾವಣೆಗೆ ಸಂಬಂಧಿಸಿದಂತೆ, ಅರ್ಜಿದಾರರು ತಮ್ಮ ವಾಸಸ್ಥಳ, ಹಾಲಿ ಜಮೀನಿನ ವಿವರ, ವರ್ಗ, ವಂತಿಗೆಯ ವಿವರ, ಜಾತಿ ಪ್ರಮಾಣ ಪತ್ರದ ವಿವರಗಳನ್ನು ನಮೂನೆಯಲ್ಲಿ ತಿಳಿಸಿರುವಂತೆ ಸಲ್ಲಿಸಬೇಕಾಗಿರುತ್ತದೆ. ತದನಂತರ ಮುದ್ರಿತ ಸ್ವೀಕೃತಿ ಪ್ರತಿಯೊಂದಿಗೆ **(acknowledgment copy)**, ಇತ್ತೀಚಿನ ಒಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಮತ್ತು ನಿಗಧಿಪಡಿಸಲಾದ ವಂತಿಗೆಯನ್ನು ಮೂಲ ಡಿ.ಡಿ ಹಾಗೂ ಆಧಾರ್ ಪ್ರತಿ, RTC , ಜಲ ಇಳುವರಿ ಪತ್ರ, ಜಾತಿ ಪ್ರಮಾಣ ಪತ್ರ, ರೇಷನ್ ಕಾರ್ಡ ಪ್ರತಿ (ಎರಡು ಸೆಟ್) ದಾಖಲೆಗಳೊಂದಿಗೆ ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯ ಕಾರ್ಯ ಮತ್ತು ಪಾಲನೆ ಉಪವಿಭಾಗ ಕಛೇರಿಗೆ ಸಲ್ಲಿಸಬೇಕಾಗಿರುತ್ತದೆ.

ಫಲಾನುಭವಿಗಳು ಆನ್‌ಲೈನ್ ನೋಂದಾವಣೆಗೆ ಸಂಬಂಧಿಸಿದಂತೆ, ಅರ್ಜಿ ನಮೂನೆ:

(I) ಜಾತಿ ವರ್ಗ/ ಸೌರ ಪಂಪ್ ಸೆಟ್ ಸಾಮರ್ಥ್ಯ*: ವರ್ಗದ ಆಯ್ಕೆಯ ಸ್ಥಳದಲ್ಲಿ ಅರ್ಜಿದಾರರು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಆಯಾ ವರ್ಗವನ್ನು ಆಯ್ಕೆ ಮಾಡುವುದು. ಯಾವ ಸಾಮರ್ಥ್ಯದ ಸೌರ ಪಂಪ್‌ಸೆಟ್‌ಗಾಗಿ ಅರ್ಜಿಯನ್ನು ಸಲ್ಲಿಸಲಾಗುತ್ತಿದೆ; 3 ಹೆಚ್.ಪಿ. ಅಥವಾ 7.5 ಹೆಚ್.ಪಿ -ಸೂಕ್ತ ಸಾಮರ್ಥ್ಯವನ್ನು ಆಯ್ಕೆ ಮಾಡುವುದು. (ತೆರೆದ ಬಾವಿಗಳಿಗೆ 3 ಹೆಚ್.ಪಿ ಸಾಮರ್ಥ್ಯ ಹಾಗೂ ಕೊಳವೆ ಬಾವಿಗಳಿಗೆ 7.5 ಹೆಚ್.ಪಿ ಸಾಮರ್ಥ್ಯವನ್ನು ಆಯ್ಕೆ ಮಾಡುವುದು.)

(II) ತರೆದ/ಕೊಳವೆ ಬಾವಿಯು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿದ್ಯುದ್ಧೀಕರಣ ವಿವರಗಳು*: ಹೌದು/ಇಲ್ಲ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ತರೆದ/ಕೊಳವೆ ಬಾವಿಯು ವಿದ್ಯುದ್ಧೀಕರಣ ಗೊಂಡಿದಲ್ಲಿ ಹೌದು ಎಂದು ಆಯ್ಕೆ ಮಾಡಿ, ಇಲ್ಲವಾದರೇ ಇಲ್ಲ ಎಂದು ಆಯ್ಕೆ ಮಾಡಿ.

1. ಅರ್ಜಿದಾರರ ಹೆಸರು ಮತ್ತು ಸಂಪರ್ಕ ವಿವರಗಳು:

(ಅ) ಅರ್ಜಿದಾರರ ಹೆಸರು*: ಅರ್ಜಿದಾರರ ಹೆಸರನ್ನು ಆಧಾರ್ ಕಾರ್ಡನಲ್ಲಿರುವಂತೆ ನಮೂದಿಸುವುದು.

(ಆ) ತಂದೆ/ಗಂಡನ ಹೆಸರು*: ಅರ್ಜಿದಾರರ ತಂದೆ/ಗಂಡನ ಹೆಸರನ್ನು ನಮೂದಿಸುವುದು.

(ಇ) ದೂರವಾಣಿ ಸಂಖ್ಯೆ*: ಆಧಾರ್ ಕಾರ್ಡಗೆ ಲಿಂಕ್ ಆಗಿರುವ ಅರ್ಜಿದಾರರನ್ನು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಯನ್ನು ನಮೂದಿಸುವುದು.

(ಈ) ಆಧಾರ್ ಕಾರ್ಡ ಸಂಖ್ಯೆ*: ಅರ್ಜಿದಾರರ ಆಧಾರ್ ಕಾರ್ಡ ಸಂಖ್ಯೆಯನ್ನು ನಮೂದಿಸುವುದು

2. ಅರ್ಜಿದಾರರ ವಾಸಸ್ಥಳದ ವಿವರಗಳು:

(ಅ) ವಿಳಾಸ*: ಅರ್ಜಿದಾರರ ವಾಸಸ್ಥಳ ವಿಳಾಸ ನಮೂದಿಸುವ ಸ್ಥಳದಲ್ಲಿ ಪತ್ರ ವ್ಯವಹಾರಕ್ಕಾಗಿ ವಿಳಾಸವನ್ನು ಭರ್ತಿ ಮಾಡುವುದು.

(ಆ) ಗ್ರಾಮದ ಹೆಸರು *:

(ಇ) ತಾಲ್ಲೂಕು*:

(ಈ) ಜಿಲ್ಲೆ*:

3. ಅರ್ಜಿದಾರರ ಜಮೀನಿನ ವಿವರಗಳು:

(ಅ) ಗ್ರಾಮದ ಹೆಸರು*:

(ಆ) ಗ್ರಾಮ ಪಂಚಾಯತಿ*:

(ಇ) ಹೊಬಳಿ*:

(ಈ) ತಾಲ್ಲೂಕು*:

(ಉ) ಜಿಲ್ಲೆ*:

(ಊ) ಸರ್ವೆ ನಂಬರ್*: ಗೇಣಿ ಮತ್ತು ಪಹಣಿ ಪತ್ರ (RTC) ದಲ್ಲಿರುವಂತೆ ಸರ್ವೆ ನಂಬರ್ ನಮೂದಿಸುವುದು

(ಋ) ಆರ್.ಟಿ.ಸಿ ನಲ್ಲಿರುವಂತೆ ಜಮೀನಿನ ಮಾಲೀಕರ ಹೆಸರು ಕಾಲಂ 9 ರಂತೆ *:

(ಎ) ತರೆದ/ಕೊಳವೆ ಬಾವಿಯ ಪಂಪ್‌ಸೆಟ್ ವಿದ್ಯುತ್ ಸಂಪರ್ಕದಲ್ಲಿದೆಯೇ*: ಹೌದು/ಇಲ್ಲ

(ಹೌದು ಆದಲ್ಲಿ ಆರ್.ಆರ್. ನಂಬರ್*ನಮೂದಿಸುವುದು)

(ಏ) ಬಾವಿಯ ಒಟ್ಟಾರೆ ಆಳ : ಅಡಿಗಳಲ್ಲಿ ನಮೂದಿಸುವುದು

4(ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ಅರ್ಜಿದಾರರು ಪಾವತಿಸಬೇಕಾದ ವಂತಿಗೆ ವಿವರಗಳು:

ಪ.ಜಾ/ಪ.ಪಂ ವರ್ಗದ ಫಲಾನುಭವಿಗಳು ವಂತಿಗೆಯನ್ನು ಡಿ.ಡಿ.ಮೂಲಕವೇ ಪಾವತಿಸಬೇಕಾಗಿರುತ್ತದೆ.

3 ಹೆಚ್.ಪಿ ಸಾಮರ್ಥ್ಯದ ಸೌರ ಪಂಪ್‌ಸೆಟ್ ಆಯ್ಕೆ ಮಾಡಿದಲ್ಲಿ ಅರ್ಜಿದಾರರು ಪಾವತಿಸಬೇಕಾದ ವಂತಿಗೆಯು ರೂ.32,300.

7.5 ಹೆಚ್.ಪಿ ಸಾಮರ್ಥ್ಯದ ಸೌರ ಪಂಪ್‌ಸೆಟ್ ಆಯ್ಕೆ ಮಾಡಿದಲ್ಲಿ ಅರ್ಜಿದಾರರು ಪಾವತಿಸಬೇಕಾದ ವಂತಿಗೆಯು ರೂ.63,380/-.

ಅರ್ಜಿದಾರರು ಆನ್ ಲೈನ್ ಅರ್ಜಿ ಸಲ್ಲಿಸುವ ಮುನ್ನ ಉದ್ದೇಶಿತ ಸೌರ ಪಂಪ್‌ಸೆಟ್ ಸಾಮರ್ಥ್ಯ ಅನುಸಾರ, ಮೇಲೆ ತಿಳಿಸಿದ ಮೊತ್ತಕ್ಕೆ ಡಿ.ಡಿ. ಪಡೆದು (ಡಿ.ಡಿ ಯನ್ನು MD, KREDL ರವರ ಹೆಸರಿಗೆ payable at Bengaluru ಪಡೆಯುವುದು) ಆನ್‌ಲೈನ್ ಅರ್ಜಿಯಲ್ಲಿ ಈ ಕೆಳಕಂಡ ವಿವರಗಳನ್ನು ಸಲ್ಲಿಸುವುದು:

(ಅ) ಡಿ.ಡಿ. ಸಂಖ್ಯೆ*:

(ಆ) ಡಿ.ಡಿ. ದಿನಾಂಕ*:

(ಇ) ಬ್ಯಾಂಕ್ ಹೆಸರು*:

4(ಬಿ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ಅರ್ಜಿದಾರರ ಬ್ಯಾಂಕ ಖಾತೆ ವಿವರಗಳು:

ಟಿಪ್ಪಣಿ: ಅರ್ಜಿಯಲ್ಲಿನ ದೋಷಗಳು, ತಪ್ಪು ಮಾಹಿತಿ, ಇದರಿಂದ ತಿರಸ್ಕೃತಗೊಳ್ಳುವ ಅರ್ಜಿಗಳನ್ನು ಗಮನದಲ್ಲಿರಿಸಿ, ಶೇ. 10 ರಷ್ಟು ಹೆಚ್ಚುವರಿ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಕೆ.ಆರ್.ಇ.ಡಿ.ಎಲ್ ವತಿಯಿಂದ ಅರ್ಜಿದಾರರ ವಂತಿಗೆಯನ್ನು ಹಿಂದಿರುಗಿಸುವ ಸಂದರ್ಭಗಳು ಉದ್ಭವಿಸುವುದರಿಂದ ಅರ್ಜಿದಾರರ ಬ್ಯಾಂಕ್ ಖಾತೆ ವಿವರಗಳನ್ನು ಪಡೆಯಲಾಗುತ್ತಿದೆ.

| | | |
|---|---|---|
| (i) | ಅರ್ಜಿದಾರರ ಹೆಸರು* | : |
| (ii) | ಖಾತೆ ಸಂಖ್ಯೆ* | : |
| (iii) | ಖಾತೆ ಮಾದರಿ (savings/current/OD)* | : |
| (iv) | ಬ್ಯಾಂಕ್ ಹೆಸರು* | : |
| (v) | ಬ್ಯಾಂಕ್ ಶಾಖೆ* | : |
| (vi) | ಐ.ಎಫ್.ಎಸ್.ಸಿ ಕೋಡ್* | : |

( * ಸೂಚನೆಯು ಕಡ್ಡಾಯವಾಗಿ ನಮೂದಿಸಬೇಕಾಗಿರುವ ಮಾಹಿತಿಯಾಗಿರುತ್ತದೆ. )

ಆನ್‌ಲೈನ್ ಮುಖಾಂತರ ಅರ್ಜಿ ನೋಂದಾಯಿಸಿಕೊಂಡ ನಂತರದ ಪ್ರಕ್ರಿಯೆ:

ಆನ್‌ಲೈನ್ ನಲ್ಲಿ ಅರ್ಜಿ ನೊಂದಾಯಿಸಿಕೊಂಡ ನಂತರ, ಪಡೆದ ಸ್ವೀಕೃತಿ ಪ್ರತಿಯಲ್ಲಿ (acknowledgement copy) ಸಹಿ ಮಾಡಿ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ನಿಗಧಿತ ಸ್ಥಳದಲ್ಲಿ ಅಂಟಿಸಿ ಸಹಿಮಾಡುವುದು. ಮೂಲ ಡಿ.ಡಿ, ಆಧಾರ್ ಕಾರ್ಡ್ ಪ್ರತಿ, ಆರ್.ಟಿ.ಸಿ ಪ್ರತಿ, ಜಲ ಇಳುವರಿ ಪ್ರಮಾಣ ಪತ್ರ, ಪಾಸ್‌ಪೋರ್ಟ್ ಅಳತೆಯ ಒಂದು ಭಾವಚಿತ್ರ, ಜಾತಿ ಪ್ರಮಾಣ ಪತ್ರ, ರೇಷನ್ ಕಾರ್ಡ ಪ್ರತಿ ಈ ಎಲ್ಲಾ ದಾಖಲೆಗಳ ಎರಡು ಸೆಟ್ ಸ್ವಯಂ ದೃಢೀಕರಿಸಿದ ಹಾರ್ಡ ಪ್ರತಿಯನ್ನು ಪರಿಶೀಲನೆಗಾಗಿ

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ದಿನಾಂಕದಿಂದ ಐದು ದಿನಗಳೊಳಗಾಗಿ ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯ ಉಪ-ವಿಭಾಗೀಯ ಕಛೇರಿಗಳಿಗೆ ಸಲ್ಲಿಸಿ ಸ್ವೀಕೃತಿ ಪಡೆದುಕೊಳ್ಳುವುದು. ವಿಳಂಭವಾದಲ್ಲಿ, ಜೇಷ್ಠತಾ ಪಟ್ಟಿಯಂತೆ ಮುಂದಿನ ಅರ್ಜಿದಾರರನ್ನು ಆಯ್ಕೆಗೆ ಪರಿಗಣಿಸಲಾಗುವುದು.

ಸೂಚನೆ:

1. ಆನ್‌ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸಂಭವಿಸಬಹುದಾದ network/connectivity ಗೆ ಸಂಬಂಧಿಸಿದ ತಾಂತ್ರಿಕ ತೊಂದರೆಗಳಿಗೆ ಕೆ.ಆರ್.ಇ.ಡಿ.ಎಲ್ ಜವಾಬ್ದಾರರಾಗಿರುವುದಿಲ್ಲ.
2. ಅರ್ಜಿಯಲ್ಲಿ ಸಲ್ಲಿಸಿರುವ ಮಾಹಿತಿಗಳಾದ ಮೂಲ ಡಿ.ಡಿ, ಆರ್.ಟಿ.ಸಿ, ಆಧಾರ್ ಕಾರ್ಡ ಸಂಖ್ಯೆ, ಜಾತಿ ಪ್ರಮಾಣ ಪತ್ರದ ಹಾಗೂ ರೇಷನ್ ಕಾರ್ಡ ಪ್ರತಿ ತಾಳೆಯಾಗಬೇಕು. ತಾಳೆಯಾಗದಿದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

*******